23. ಬೆರಳಚ್ಚುಗಾರರು	–	15	–	13
24. ಟ್ರೇಸರ್	–	3	–	–
25. ಬ್ಲೂಪ್ರಿಂಟರ್	–	3	–	–
26. ಅನುಚರರು (ಅಟೆಂಡರ್)	–	1	–	1
27. ನಾಲ್ಕನೇ ದರ್ಜೆ ನೌಕರರು (ಪೀವನ್)	1	15	–	34
28. ಕಾವಲುಗಾರರು (ವಾಚ್‌ಮನ್)	1	11	–	–
29. ವಾಹನ ಚಾಲಕರು	1	12	–	11
ಒಟ್ಟು	30	166	27	197

ಪ್ರತಿವಿಧಾನ ಸಭಾಕ್ಷೇತ್ರಕ್ಕೆ 40 ಲಕ್ಷ ರೂಪಾಯಿಗಳನ್ನು ಒದಗಿಸುವ ತೀರ್ಮಾನ

151 (452) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರತಿ ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿ ಕೆಲಸಗಳಿಗೆ ಲೋಕೋಪಯೋಗಿ ಇಲಾಖೆ ಮುಖಾಂತರ 40 ಲಕ್ಷ ರೂಪಾಯಿ ಒದಗಿಸಲು (1992–93)ರಲ್ಲಿ ಸರ್ಕಾರ ತೀರ್ಮಾನ ತೆಗೆದುಕೊಂಡಿರುವುದು ನಿಜವೆ;

ಆ) ಹಾಗಿದ್ದಲ್ಲಿ ಅದಕ್ಕೆ ಹಣ ಒದಗಿಸಲಾಗಿದೆಯೆ;

ಇ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಪ್ರಸ್ತಾಪವು ಪರಿಶೀಲನೆಯಲ್ಲಿದೆ.

ಆ) ಇಲ್ಲ

ಇ) ಅನುದಾನ ನಿಗದಿಪಡಿಸುವ ವಿಷಯವು ಪರಿಶೀಲನೆಯಲ್ಲಿದೆ.

ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಅತೀವೃಷ್ಟಿಯಿಂದ ಹಾಳಾದ ರಸ್ತೆಗಳ ದುರಸ್ತಿಗೆ ಹಣ

152 (544) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ವಿಧಾನಸಭಾ ಕ್ಷೇತ್ರದ ಕಸಬ ಕಟ್ಟಾಯ ಮತ್ತು ಶಾಂತ ಗ್ರಾಮದ ಹೋಬಳಿಗಳಲ್ಲಿ ಕಳೆದ ವರ್ಷದ ಅತೀವೃಷ್ಟಿಯಿಂದ ಯಾವ ಯಾವ ಊರಿನ ಕೂಡ ರಸ್ತೆಗಳು ಕೊಚ್ಚಿ ಹೋಗಿದ್ದು ವಾಹನ ಸಂಚಾರಕ್ಕೆ ಅಡ್ಡಿಯಾಗಿದೆ (ವಿವರ ಕೊಡುವುದು);

ಆ) ಈ ರಸ್ತೆಗಳ ರಿಪೇರಿಗೆ ಅಂದಾಜುಗಳು ತಯಾರಾಗಿದೆಯೆ (ವಿವರ ಕೊಡುವುದು);

ಇ) ಈ ಅಂದಾಜುಗಳ ಒಟ್ಟು ಮೊಬಲಗೆಷ್ಟು (ವಿವರ ಕೊಡುವುದು);